PW–1

ಇಂದು ದಿ.26–09–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ– ಅರ್ಜಿದಾರರ ಪರ ಶ್ರೀಮತಿ ಎಸ್ ಸಿ ವಕೀಲರಿಂದ.

ನಾನು ಈ ಪ್ರಕರಣದಲ್ಲಿ ಅರ್ಜಿದಾರನಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದ್ದು, ಅದನ್ನು ಓದಿ , ತಿಳಿದುಕೊಂಡು ಅದಕ್ಕೆ ಸಹಿ ಮಾಡಿದ್ದೇನೆ.

ನನ್ನ ಜಮೀನಿ ಸರ್ವೆ ನಂ.97/5 ಕ್ಷೇತ್ರ 2 ಎಕರೆಗೆ 22 ಗುಂಟೆ ಸಂಬಂಪಟ್ಟಂತೆ ಪಹಣಿ ಪತ್ರಿಕೆ ಹಾಜರುಪಡಿಸಿದ್ದು, ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಹಿರಿಯ ಉಪ ನೋಂದಣಿ ಅಧಿಕಾರಿ , ದಾವಣಗೆರೆ ಇವರು ಸ್ಥಿರಾಸ್ತಿ ಮಾರ್ಗಸೂಚಿ ದರಪಟ್ಟಿ ಹಾಜರುಪಡಿಸಿದ್ದು, ಅದನ್ನು ನಿಪಿ.2 ಎಂದು ಗುರುತಿಸಲಾಯಿತು.

ಪಾಟೀಸವಾಲುಃ–ಎದುರುದಾರರ ಪರ ಶ್ರೀ ಡಿಎನ್ ಎಸ್ ವಕೀಲರಿಂದ

ಜಮೀನಿನಲ್ಲಿ ಲೈನ್ ಎಳೆದು 15 ವರ್ಷಗಳ ಮೇಲೆ ಆಗಿದೆ. ಸದರಿ ಜಮೀನನ್ನ ತಂದೆ ಹೆಸರಿನಲ್ಲಿತ್ತು , ನನ್ನ ಹೆಸರಿಗೆ ಬಂದಿರುತ್ತದೆ. ನನ್ನ ತಂದೆ ಜಮೀನಿನ ವ್ಯವಹಾರ ನೋಡಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ನನ್ನ ತಂದೆ ಪರಿಹಾರ ಪಡೆದಿರುತ್ತಾರೆ ಎನ್ನುವುದು ಸುಳ್ಳು. 3 ವರ್ಷದ ಒಳಗಾಗಿ ಪ್ರಕರಣ ದಾಖಲು ಮಾಡದ್ದರಿಂದ ನನ್ನ ಅರ್ಜಿಗೆ ಕಾಲಮಿತಿ ಬಾಧಕವಿರುತ್ತದೆ ಎನ್ನುವುದು ಸರಿಯಲ್ಲ.

ನನ್ನ ಜಮೀನಿನಲ್ಲಿ ಮೆಕ್ಕೆ ಜೋಳ ಬೆಳೆ ಬೆಳೆಯುತ್ತೇವೆ. ಬೋರ್ ವೆಲ್ ಇಲ್ಲ. ಸದರಿ ಲೈನನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಎಳೆಯಲಾಗಿದೆ ಎನ್ನುವುದು ನಿಜ. ನಮ್ಮ ಜಮೀನಿನ ಮಧ್ಯದಲ್ಲಿ ಲೈನ್ ಎಳೆಯಲಾಗಿದ್ದು, ಅದಕ್ಕೆ ಸಂಬಧಪಟ್ಟಂತೆ ಫೋಟೋ ಹಾಜರುಪಡಿಸಿಲ್ಲ. ಹೈನುಗಾರಿಕೆ ಮಾಡಲು ತೊಂದರೆ ಇಲ್ಲ. ಜಮೀನನ್ನು 25 ಲಕ್ಷಕ್ಕೆ ಮಾರಾಟ ಮಾಡುವ ಪಕ್ಕದ ಜಮೀನಿನವರು ಕೇಳಿದ್ದರು. ದಾಖಲೆ ಹಾಜರುಪಡಿಸಿಲ್ಲ. 2 ಲಕ್ಷ ಪರಿಹಾರ ಕೇಳಿದ್ದು , ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಐದು ಹುಣುಸೆ ಮರಗಳು ಜಮೀನಿನಲ್ಲಿವೆ.

ಮರು ವಿಚಾರಣೆಃ– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.